O.S. No- 135/2018

Pw-1

<u>ದಿನಾಂಕಃ 13-06-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**ಪಾಟೀ ಸವಾಲು ಶ್ರೀ. ಡಿ ಡಿ ಜೆ 1 , 2 , 4, 5 ಮತ್ತು 7 ನೇ ಪ್ರತಿವಾದಿ ಪರ ವಕೀಲರಿಂದ-**

ನನ್ನ ಗಂಡನ ಮನೆ ಹುನ್ನೂರ ಆಗಿರುತ್ತದೆ . ನನ್ನ ಮದುವೆಯಾಗಿ ಸುಮಾರು 25 ವರ್ಷಗಳು ಆಗಿರುತ್ತದೆ . ನನ್ನ ಮದುವೆಯಾದ ನಂತರ ನಾನು ನನ್ನ ಗಂಡನ ಮನೆಯಾದ ಹುನ್ನೂರದಲ್ಲಿ ವಾಸ ಮಾಡಲು ಹೋಗಿರುತ್ತೇನೆ . ನಾನು ಹುನ್ನೂರ ನಲ್ಲಿ ವಾಸವಾಗಿದ ನಂತರ ನನ್ನ ಮಕ್ಕಳು ಅಲ್ಲೆ ಜನಿಸಿರುತ್ತಾರೆ . ನಾನು ನನ್ನ ಗಂಡನ ಮನೆಯಲ್ಲಿ ಆರಾಮಾಗಿ ವಾಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ . ನಾನು ನನ್ನ ತವರು ಮನೆಗೆ ಬಂದು ಸುಮಾರು 25 ವರ್ಷಗಳು ಆಗಿರುತ್ತದೆ . ನಿಕರವಾದ ದಿನಾಂಕ ನನಗೆ ಗೊತ್ತಿಲ್ಲ . ನಾನು ಇಲ್ಲಿಯವರೆಗೆ ನನ್ನ ಗಂಡ ತೊಂದರೆ ಕೊಡುತ್ತಿದ್ದ ಬಗ್ಗೆ ಯಾವುದೇ ಪಿರ್ಯಾದಿಯನ್ನು ಸಲ್ಲಿಸಿರುವದಿಲ್ಲ ಎಂದರೆ ಸರಿಯಲ್ಲ . ನಾನು ಆ ರೀತಿ ಪಿರ್ಯಾದಿ ಸಲ್ಲಿಸಿ ಸುಮಾರು 23 ವರ್ಷಗಳು ಆಗಿರುತ್ತದೆ . ಅಂದಿನಿಂದ ನಾನು ಇಲ್ಲಿಯವರೆಗೆ ನನ್ನ ಗಂಡನ ಮನೆಯಲ್ಲಿ ವಾಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ . ನಾನು ನನ್ನ ಗಂಡನನ್ನು ಬಿಟ್ಟು ಸುಮಾರು 25 ವರ್ಷಗಳು ಆಗಿರುತ್ತವೆ . ನಾನು ನನ್ನ ಗಂಡನ ಮನೆಯಲ್ಲಿ ಸುಮಾರು 02 ವರ್ಷಗಳು ಇದ್ದು ತದನಂತರ ತವರು ಮನೆಗೆ ಬಂದಿರುತ್ತೇನೆ . ನಾನು ನನ್ನ ತವರು ಮನೆಯಾದ ಶಿವಾಜಿ ವೃತ್ತದಲ್ಲಿ ಬಾರಾ ಇಮಾಮ ಗಲ್ಲಿಯ 04 ಕೋಣೆಯ ಮನೆಯಲ್ಲಿ ವಾಸ ಮಾಡುತ್ತಿದ್ದೆ .

ನಾನು ಜಮಖಂಡಿಯಲ್ಲಿ ವಾಸ ಮಾಡುತ್ತಿದ್ದ ಬಗ್ಗೆ ನನ್ನ ಆಧಾರ ಕಾರ್ಡ ಮತ್ತು ಚುನಾವಣೆ ಗುರುತಿನ ಚೀಟಿ ಮತ್ತು ಪಡಿತರ್ ಚೀಟಿಯನ್ನು ಮಾಡಿರುವದಿಲ್ಲ ಅದರೆ ಹೊಸ ಮನೆಯ ವಿಳಾಸದಲ್ಲಿ ಮಾಡಿಸಿರುತ್ತೇನೆ . ನಾನು ನನ್ನ ತವರು ಮನೆಯಲ್ಲಿ ಇಲ್ಲದೇ ಇದ್ದ ಕಾರಣ ನಾನು ನನ್ನಯಾವುದೇ ಗುರುತಿನ ಚೀಟಿಗಳನ್ನು ಜಮಖಂಡಿಯ ವಿಳಾಸದಲ್ಲಿ ಮಾಡಿಸಿರುವದಿಲ್ಲ , ನಾನು ನನ್ನ ಗಂಡನ ಜೊತೆ ಈಗಲೂ ಸಹ ಹುನ್ನೂರದಲ್ಲಿ ವಾಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ . ಹುನ್ನೂರ ದಲ್ಲಿ ನನ್ನ ಗಂಡನ ಮನೆ ಇರುತ್ತದೆ . ನಾನು ಹುನ್ನೂರ ಗ್ರಾಮವನ್ನು ಬಿಟ್ಟು ಜಮಖಂಡಿಗೆ ಮತ್ತು ಒಂದು ದಾವಾ ಆಸ್ತಿಗೆ ಯಾವತ್ತು ಸಹ ಬಂದಿಲ್ಲ ಎಂದರೆ ಸರಿಯಲ್ಲ . ಅದೇ ರೀತಿ ನನ್ನ ಗಂಡನ ಜೊತೆ ಜಗಳ ಮಾಡಿ ಅತನ ವಿರುದ್ಧ ಪಿರ್ಯಾದಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳಾಗಿ ಹೇಳುತ್ತಿದ್ದೇನೆಂದರೆ ಸರಿಯಲ್ಲ .

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ, ಸಮಯ ನೀಡಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

sd/-

ಪ್ರಧಾನ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ